1597 (2316) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) – ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಗಸ್ಟ್ 2006 ರಿಂದ ಇಲ್ಲಿಯವರೆಗೂ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 1 ರಿಂದ 5ನೇ ತರಗತಿಯವರೆವಿಗೂ ಶಾಲೆಗಳಿಗೆ ನೀಡಿರುವ ನೋಂದಣಿ ಎಷ್ಟು ಹಾಗೂ ಅವು ಯಾವುವು (ಸಂಪೂರ್ಣ ಮಾಹತಿ ವಿಳಾಸದೊಂದಿಗೆ ನೀಡುವುದು)

ಆ) ಮಾತೃಭಾಷಾ ನೀತಿ ಉಲ್ಲಂಘನೆ ಪಟ್ಟಿ ಪ್ರಕಟವಾದ ನಂತರ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 1 ರಿಂದ 5ನೇ ತರಗತಿ ಕನ್ನಡ ಮಾಧ್ಯಮ ಶಾಲೆಗಳಿಗೆ ನೀಡಿರುವ ಅನುಮತಿ ಪಡೆದ ಟ್ರಸ್ಟ್, ಸೊಸೈಟಿ ಯಾವುವು (ಸಂಪೂರ್ಣ ಮಾಹಿತಿ ವಿಳಾಸದೊಂದಿಗೆ ನೀಡುವುದು),

ಇ) ಮಾತೃಭಾಷಾ ನೀತಿ ಉಲ್ಲಂಘನೆಯಡಿ ಮಾನ್ಯತೆ ರದ್ದಾಗದ ಶಾಲೆಗಳಾವುವು (ಪಟ್ಟಿಯನ್ನು ಸಂಪೂರ್ಣ ವಿಳಾಸದೊಂದಿಗೆ ನೀಡುವುದು)

ಈ) ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಮಾತೃಭಾಷಾ ನೀತಿ ಉಲ್ಲಂಘಿಸಿದ ಶಾಲೆಗಳು ಯಾವುವು, ಅವುಗಳ ಸಂಪೂರ್ಣ ವಿಳಾಸವನ್ನು ವಲಯವಾರು ಒದಗಿಸುವುದು,

ಉ) ಮಾತೃಭಾಷಾ ನೀತಿ ಉಲ್ಲಂಘನೆ ಪಟ್ಟಿಗೆ ಸೇರದ ಶಾಲೆಗಳ ಮರುತಪಾಸಣೆಯನ್ನ ಯಾವ ಹಂತದ ಅಧಿಕಾರಿಗಳಿಂದ ತನಿಖೆಗೆ ಒಳಪಡಿಸಲಾಗುವುದು,

ಊ) 2006–07ರ ಶೈಕ್ಷಣಿಕ ವರ್ಷ ಏಪ್ರಿಲ್ 10ಕ್ಕೆ ಮುಕ್ತಾಯಗೊಳ್ಳುವುದರಿಂದ, ಮಾತೃಭಾಷಾ ನೀತಿ ಉಲ್ಲಂಘಿಸಿದ ಶಾಲೆಗಳಿಗೆ ಏಪ್ರಿಲ್ 10 ರೊಳಗೆ ತನಿಖೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ,

ಋ) ಬೆಂಗಳೂರು ಉತ್ತರ 1, 2, 3, 4, ವಲಯದಲ್ಲಿ ಮಾತೃಭಾಷಾ ನೀತಿ ಉಲ್ಲಂಘನೆ ಮಾಡಿದ ಶಾಲಾ ಆಡಳಿತ ಮಂಡಳಿಯ ಸದಸ್ಯರ ಮತ್ತೊಂದು ಆಡಳಿತ ಮಂಡಳಿಯ ಹೆಸರಿನಲ್ಲಿ ಬೇರೆ ಶಾಲೆಯ ಹೆಸರನ್ನಿಟ್ಟು 1 ರಿಂದ 5ನೇ ತರಗತಿಗೆ ಅನುಮತಿ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಎ) ಬಂದಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಉನ್ನತ ಮಟ್ಟದ ತನಿಖೆಗೆ ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಆಗಸ್ಟ್ 2006 ರಿಂದ ಇಲ್ಲಿಯವರೆಗೂ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 1 ರಿಂದ 5 ನೇ ತರಗತಿಯವರೆಗೂ ಶಾಲೆಗಳಿಗೆ ನೀಡಿರುವ ನೋಂದಣಿ ಒಟ್ಟು – 11

- **ಬೆಂಗಳೂರು ಉತ್ತರ ವಲಯ – 1**

1) ಜ್ಞಾನ ಜ್ಯೋತಿ ವಿದ್ಯಾಮಂದಿರ ಶಾಲೆ, ನಂ 248, ಮಹಾಲಕ್ಷ್ಮಿಪುರ ಬೆಂಗಳೂರು–86

2) ಕೆ ಜಿ ವಿದ್ಯಾಮಂದಿರ, ವೀರಭದ್ರಪ್ಪ ಲೇಔಟ್, ಪೀಣ್ಯ 2 ನೇ ಹಂತ, ಬೆಂಗಳೂರು

3) ಮೌಂಟ್ ಕ್ಲೇರ್ ಪಬ್ಲಿಕ್ ಸ್ಕೂಲ್, ಲಗ್ಗೆರೆ, ಬೆಂಗಳೂರು

- **ಬೆಂಗಳೂರು ಉತ್ತರ ವಲಯ – 2**

1) ಶಾರದಾ ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಹೆಚ್ ಎಂ ಟಿ ಲೇಔಟ್, ಬೆಂಗಳೂರು

2) ಬಿ ಎಂ ಸಿ ಶಾಲೆ, ನಾಗಶೆಟ್ಟಿಹಳ್ಳಿ, ಬೆಂಗಳೂರು

3) ಸ್ಫೂರ್ತಿ ವಿದ್ಯಾನಿಕೇತನ, ಚೋಳನಾಯಕನಹಳ್ಳಿ ಬೆಂಗಳೂರು

- **ಬೆಂಗಳೂರು ಉತ್ತರ ವಲಯ – 3**

1) ಫ್ರಾವಿಡನ್ಸ್ ಪಬ್ಲಿಕ್ ಶಾಲೆ, ದೊಡ್ಡಬಾಣಸವಾಡಿ, ಬೆಂಗಳೂರು

2) ಮನೇಹುಹಲ್ ಉಲುಮ್ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಬೆಂಗಳೂರು

● **ಬೆಂಗಳೂರು ಉತ್ತರ ವಲಯ – 4**

1) ತವಕ್ಕಲ್ ಇಂಟರ್‌ನ್ಯಾಷನಲ್ ಸ್ಕೂಲ್, ಹೆಣ್ಣೂರು, ಬೆಂಗಳೂರು

2) ಜ್ಞಾನಗಂಗಾ ಪಬ್ಲಿಕ್ ಸ್ಕೂಲ್, ದೊಡ್ಡಬ್ಯಾಲಕೆರೆ, ಶಿವಕೋಟೆ ಅಂಚೆ, ಬೆಂಗಳೂರು

3) ಐಕಾನ್ ಇಂಟರ್‌ನ್ಯಾಷನಲ್ ಸ್ಕೂಲ್, ತಿರುಮೇನ ಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು

ಆ) ● **ಬೆಂಗಳೂರು ಉತ್ತರ ವಲಯ – 1**

1) ಜ್ಞಾನಜ್ಯೋತಿ ಟ್ರಸ್ಟ್, ಎನ್ ಆರ್ ಕಾಲೋನಿ, ಬೆಂಗಳೂರು –19

2) ಯಶಸ್ವಿನಿ ಎಜುಕೇಷನ್ ಸೊಸೈಟಿ, ಪೀಣ್ಯ, ಬೆಂಗಳೂರು

3) ಮೌಂಟ್ ಕ್ಲೀನ್ ಎಜುಕೇಷನ್ ಸೊಸೈಟಿ, ವಿಜಯನಗರ, ಬೆಂಗಳೂರು

● **ಬೆಂಗಳೂರು ಉತ್ತರ ವಲಯ – 2**

1) ಶ್ರೀ ಶಾರದ ವಿದ್ಯಾನಿಕೇತನ ಟ್ರಸ್ಟ್, ಎನ್ ಆರ್ ರಸ್ತೆ, ಬೆಂಗಳೂರು

2) ಮಾತಾಜಿ ಎಜುಕೇಷನ್ ಸೊಸೈಟಿ, ಸಂಜಯನಗರ, ಬೆಂಗಳೂರು

3) ಲಕ್ಷ್ಮೀ ನರಸಿಂಹಸ್ವಾಮಿ ಎಜುಕೇಷನ್ ಟ್ರಸ್ಟ್ ಆರ್ ಟಿ ನಗರ ಬೆಂಗಳೂರು

● **ಬೆಂಗಳೂರು ಉತ್ತರ ವಲಯ – 3**

1) ಬೆಂಗಳೂರು ಉತ್ತರ ಎಜುಕೇಷನ್ ಟ್ರಸ್ಟ (ರಿ) ದೊಡ್ಡಬಾಣಸವಾಡಿ, ಬೆಂಗಳೂರು

2) ಇಸ್ಲಾಮಿಯಾ ಇಸ್ಲಾಮಿಯಾ ಮೇಹುಲ್ಲು ಉಲುಮ್ ಎಜುಕೇಷನ್ ಟ್ರಸ್ಟ್, ಬೆಂಗಳೂರು

● **ಬೆಂಗಳೂರು ಉತ್ತರ ವಲಯ – 4**

1) ತವಕ್ಕಲ್ ಇಂಟರ್‌ನ್ಯಾಷನಲ್ ಎಜುಕೇಷನ್ ಸೊಸೈಟಿ, ಹೆಣ್ಣೂರು, ಬೆಂಗಳೂರು

2) ಜ್ಞಾನಗಂಗಾ ಪಬ್ಲಿಕ್ ನ್ಯಾಷನಲ್ ಎಜುಕೇಷನ್ ಸೊಸೈಟಿ, ಬ್ಯಾಲಕೆರೆ, ಬೆಂಗಳೂರು

3) ಐಕಾನ್ ಇಂಟರ್‌ನ್ಯಾಷನಲ್ ಎಜುಕೇಷನಲ್ ಸೊಸೈಟಿ, ತಿರುಮೇನ ಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು

ಇ) ಪಟ್ಟಿಯನ್ನು ಲಗತ್ತಿಸಿದೆ

ಈ) ಪಟ್ಟಿಯನ್ನು ಲಗತ್ತಿಸಿದೆ

ಉ) ಪ್ರಸ್ತುತ 588 ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಿರುವುದರಿಂದ ಮರು ತಪಾಸಣೆಗೆ ಆಸ್ಪದವಿಲ್ಲ

ಊ) ದಿನಾಂಕ 06–11–2006 ರ ಸರ್ಕಾರದ ಆದೇಶ ಸಂಖ್ಯೆ ಇಡಿ 203 ಪಿಜಿಸಿ 2006 ರನ್ವಯ ಎಪ್ರಿಲ್ 10–2007 ರವರೆಗೆ ಆ ರದ್ದತಿ ಆದೇಶಗಳ ಜಾರಿಗೊಳಿಸುವಿಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ದಿನಾಂಕ 10–04–2007 ರಿಂದ ಸದರಿ ಆದೇಶಗಳನ್ನು ಜಾರಿಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

ಋ) ಇಲ್ಲ

ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರ ವಲಯ –1, 2, 3, ಮತ್ತು 4 ಇವರು ಅನುಮತಿ ನೀಡುವ ಸಕ್ಷಮ ಪ್ರಾಧಿಕಾರಿಗಳಾಗಿದ್ದು, ಇಂತಹ ಯಾವುದೇ ಅನುಮತಿ ನೀಡಿರುವುದಿಲ್ಲವೆಂದು ದೃಢೀಕರಿಸಿರುತ್ತಾರೆ

ಎ) 'ಋ' ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

1598 (2221) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ – ಆಲಮಟ್ಟಿ ರಸ್ತೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,